# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89 ಹೊಸ ವಾರ್ಡ್ ಸಂಖ್ಯೆ 179 ಜೋಗುಪಾಳ್ಯ ವಾರ್ಡಿನ ದಿನಾಂಕ: 05-11-2022 ರಂದು ನಡೆದ ಸಭೆಯ ನಡವಳಿಗಳು**

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21/21-09-2020 ರ ಆದೇಶದಂತೆ ದಿನಾಂಕ: 05-11-2022 ರಂದು Bangalore International Centre, Domlur ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯು ದಿನಾಂಕ: 05.11.2022 ರಂದು ನಡೆಯಿತು.

## ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಆರೋಗ್ಯ, ಅರಣ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು BESCOM ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ ರಮೇಶ್ ರೆಡ್ಡಿ, ಶ್ರಿಮತಿ ವಿಜಯಲಕ್ಷ್ಮೀ, ಶ್ರೀಮತಿ ಆಶಾ ಆಲ್ವಿನ್, ಶ್ರೀಮತಿ ಗಾಯತ್ರಿ, ಶ್ರೀ ಉಮೇಶ್, ಶ್ರೀ ಗಜರಾಜ್ ಮತ್ತು ಶ್ರೀ ಗಣೇಶ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ವಾರ್ಡಿನ ನಾಗರೀಕರಾದ ಶ್ರೀ ಸಿದ್ದೆಗೌಡರು ಮಾತನಾಡುತ್ತಾ ವಾರ್ಡಿನಲ್ಲಿರುವ ಸಾರ್ವಜನಿಕ ನಲ್ಲಿಗಳನ್ನು ತೆಗೆಯಕೂಡದೆಂದು ಹಾಗೂ ವಾರ್ಡಿನ ಎಲ್ಲಾ ಮನೆಗಳಿಗೂ ಸಹ ನೀರು ಸರಬರಾಜಿನ ಸಂಪರ್ಕವನ್ನು ನೀಡಬೇಕಾಗಿ ಕೊರಿರುತ್ತಾರೆ-BWSSB ವಿಭಾಗದವರು ಕ್ರಮ ತೆಗೆದುಕೊಳ್ಳುವುದು.
2) ವಾರ್ಡಿನ ಸಮೀತಿ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮೀ ರವರು ಮಾತನಾಡುತ್ತಾ ಅಪ್ಪಯ್ಯ ಗಾರ್ಡನ್ 2ನೇ ಅಡ್ಡರಸ್ತೆಯು ಹದಗೆಟ್ಟಿದ್ದು ಇದರಿಂದ ಸಾರ್ವಜನಿಕರಿಗೆ ಒಡಾಡಲು ತೊಂದರೆಯಾಗುತ್ತಿದೆ, ಕೂಡಲೆ ರಸ್ತೆಗೆ ಕಾಂಕ್ರೀಟ್ ಹಾಕಬೇಕೆಂದು ಕೋರಿರುತ್ತಾರೆ.- .- ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿ ವಿಭಾಗ ಬಿಬಿಎಂಪಿ ಕ್ರಮವಹಿಸುವುದು.
3) ವಾರ್ಡಿನ ನಾಗರೀಕರಾದ ಬಿ.ಅಶ್ವಥ್ ನಾರಾಯಣ್ ರವರು ದೂರನ್ನು ನೀಡುತ್ತಾ ಜಿ ನಂ 2ನೇ ಬೀದಿಯಲ್ಲಿ ಮಳೆ ಬಂದಾಗ ಒಳಚರಂಡಿಯ ನೀರು ತುಂಬಿ ರಸ್ತೆಯಲ್ಲಿಯರಿದು ಅಕ್ಕಪಕ್ಕದ ಮನೆಗಳಿಗೆ ಚರಂಡಿಯ ನೀರು ಬರುತ್ತದೆ, ಇದರಿಂದ ವಾಸಿಸುವ ನಾಗರೀಕರಿಗೆ ಸಮಸ್ಯಯಾಗುತ್ತಿದ್ದು ದುರಸ್ಥಿಗೊಳಿಸಬೇಕೆಂದು ಕೇಳಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿ ಬಿಬಿಎಂಪಿ ರವರು ಕ್ರಮವಹಿಸುವುದು.

4) ವಾರ್ಡಿನ ಸಮೀತಿ ಸದ್ಯಸ್ಯರಾದ ಗಜರಾಜರವರು ಮಾತನಾಡುತ್ತಾ ವಾರ್ಡಿನ ಮಾರಪ್ಪ ರಸ್ತೆ ಮತ್ತು ಮುನಿಸ್ವಾಮಪ್ಪ ರಸ್ತೆಯಲ್ಲಿ ಈಗಾಗಲೇ ಚರಂಡಿಯಲ್ಲಿರುವ ಹೂಲನ್ನು ಎತ್ತಿರುತ್ತಾರೆ ಆದರೂ ಸಹ ಒಳಚರಂಡಿಯ ನೀರು ತುಂಬಿ ರಸ್ತೆಯಲ್ಲೆಲ್ಲ ಅಕ್ಕಪಕ್ಕದ ಮನೆಗಳಿಗೆ ಚರಂಡಿಯ ನೀರು ಬರುತ್ತದೆ, ಇದರಿಂದ ವಾಸಿಸುವ ನಾಗರೀಕರಿಗೆ ಸಮಸ್ಯಯಾಗುತ್ತಿದ್ದು ದುರಸ್ಥಿಗೊಳಿಸಬೇಕೆಂದು ಕೇಳಿರುತ್ತಾರೆ.
ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿ ಬಿಬಿಎಂಪಿ ರವರು ಕ್ರಮವಹಿಸುವುದು.

5) ವಾರ್ಡಿನ ಮಹಿಳಾ ನಾಗರೀಕರೊಬ್ಬರು ಮಾತನಾಡುತ್ತಾ ಜೋಗುಪಾಳ್ಯ 5ನೇ ಬೀದಿ ರಸ್ತೆಯು ಬಹಳ ಹದಗೆಟ್ಟಿದ್ದು ಕೂಡಲೆ ಕಾಂಕ್ರೀಟ್ ಹಾಕಬೇಕೆಂದು 10ನೇ ಜಿ ಬೀದಿಯಲ್ಲಿ ಗುಂಡಿಬಿದ್ದಿದ್ದು ಹಾಗೂ ವಾರ್ಡಿನಲ್ಲಿರುವ ರಸ್ತೆಯ ಗುಂಡಿಗಳನ್ನು ಮುಚ್ಚಬೇಕೆಂದು ಕೋರಿರುತ್ತಾರೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು,**

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ